(15)

<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋವಿಂದ ರಾಜು ಇವರು ನಿಯಮ 72 ರಡಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ</u>

2023ನೇ ಇಸವಿ ರಾಜ್ಯದ ಪಾಲಿಗೆ ಕರಾಳ ವರ್ಷ ಎನ್ನಬಹುದು. ನೈಋತ್ಯ ಮುಂಗಾರು ಕೈಕೊಟ್ಟಿದ್ದು, ಒಂದಾದರೆ ವಿವಿಧ ಕಾರಣದಿಂದ ಸಂಭವಿಸಿದ ಬೆಳಹಾನಿ ಪರಿಣಾಮ ಮಾಡಿದ್ದ ಸಾಲ ತೀರಿಸಲಾಗದ ದುಸ್ಥಿತಿಯಿಂದ ದೊಡ್ಡಸಂಖ್ಯೆಯಲ್ಲಿ ಅನ್ನದಾತರು ಸಾವಿನ ಮನೆಯ ಕದ ತಟ್ಟಿದ್ದಾರೆ. ಈ ವರ್ಷದ ಏಪ್ರಿಲ್ 1 ರಿಂದ ಸೆಪ್ಟೆಂಬರ್ 9ವರೆಗೆ ರಾಜ್ಯದಲ್ಲಿ ಒಟ್ಟಾರೆ ಜೀವ ಕಳೆದುಕೊಂಡಿರುವ ಬಗ್ಗೆ ದಾಖಲಾಗಿರುವ ಪ್ರಕರಣಗಳ ರೈತರ ಸಂಖ್ಯೆ ಬರೋಬ್ಬರಿ 251. ಒಟ್ಟಾರೆ ಪ್ರಕರಣಗಳನ್ನು ಸರ್ಕಾರದ ಪರಿಶೀಲನೆಯ ಬಳಿಕ 18 ಆತ್ಮಹತ್ಯೆ ಪ್ರಕರಣಗಳನ್ನು ತಿರಸ್ಕೃತಗೊಳಿಸಲಾಗಿದೆ. ಅಷ್ಟೇ ಅಲ್ಲದೆ 174 ರೈತರು ಆತ್ಮಹತ್ಯೆಗೆ ಶರಣಾಗಿರುವ ಬಗ್ಗೆ ಸರ್ಕಾರವೇ ಒಪ್ಪಿಕೊಂಡಿದೆ. 59 ಆತ್ಮಹತ್ಯೆಗಳು ಪರಿಹಾರಕ್ಕೆ ಯೋಗ್ಯವೇ ಎಂಬ ಬಗ್ಗೆ ಅಂತಿಮ ತೀರ್ಮಾನ ಆಗಿಲ್ಲ. 39 ಪ್ರಕರಣಗಳಲ್ಲಿ ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕೃತ ವರದಿಯನ್ನು ನಿರೀಕ್ಷೆ ಮಾಡಲಾಗುತ್ತಿದೆ. ಮತ್ತಿತರ ದಾಖಲಾತಿ ಕಾರಣಕ್ಕೆ 20 ರೈತರ ಆತ್ಮಹತ್ಯೆ ಪ್ರಕರಣಗಳನ್ನು ಕಾಯ್ದಿರಿಸಲಾಗಿದೆ. ಈ ವಿಷಯವು ರೈತರ ಹಿತದೃಷ್ಟಿಯಿಂದ ತುಂಬ ಮಹತ್ವದ್ದಾಗಿರುವುದರಿಂದ ಈ ವಿಷಯವನ್ನು ಮಾನ್ಯ ಕೃಷಿ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.
[ಕೃಷಿ ಇಲಾಖೆಯಿಂದ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)ಗೆ ವರ್ಗಾವಣೆಯಾಗಿರುತ್ತದೆ].

<u>ಉತ್ತರ</u>

ಸರ್ಕಾರದ ಆದೇಶ ಸಂಖ್ಯೆ: ಕೃತೋಇ 280 ಕೃಉಇ 2003, ದಿನಾಂಕ:18.07.2003 ರನ್ವಯ ಬೆಳೆ ಹಾನಿ, ಸಾಲಭಾದೆ, ಬೆಲೆ ಕುಸಿತ ಇತ್ಯಾದಿ ಕಾರಣಗಳಿಂದ ಸಂಕಷ್ಟಕ್ಕೆ ಒಳಗಾದ ರೈತರು ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ಪರಿಹಾರವನ್ನು ಒದಗಿಸಲು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದ್ದು, ಸದರಿ ಸಮಿತಿಯ ನಿರ್ಣಯದ ಮೇರೆಗೆ ಅರ್ಹ ರೈತ ಕುಟುಂಬಕ್ಕೆ ಸರ್ಕಾರದ ಆದೇಶ ಸಂಖ್ಯೆ ಕೃಇ 57 ಕೃಉಇ 2015(ಭಾ-1), ದಿನಾಂಕ:11.11.2015 ರಂತೆ ರೂ.5 ಲಕ್ಷಗಳ ಪರಿಹಾರದ ಮೊತ್ತವನ್ನು ಉಪವಿಭಾಗದ ಮಟ್ಟದ ಸಮಿತಿಯ ವರದಿಯನ್ನು ಆಧರಿಸಿ ಕಂದಾಯ ಇಲಾಖೆ ವತಿಯಿಂದ ಪಾವತಿಸಲು ಕ್ರಮವಹಿಸಲಾಗುತ್ತಿದೆ.

2023-24ನೇ ಸಾಲಿನ ಆಯವ್ಯಯದಲ್ಲಿ ರೈತರ ಆತ್ಮಹತ್ಯೆ, ಬಣವೆ ನಷ್ಟ ಮತ್ತು ಹಾವು-ಕಡಿತ/ಆಕಸ್ಮಿಕ ಮರಣ ಪ್ರಕರಣಗಳಿಗೆ ಪರಿಹಾರವನ್ನು DBT ಮುಖಾಂತರ ಪಾವತಿಸುವ ಸಂಬಂಧ ಲೆಕ್ಕ ಶೀರ್ಷಿಕೆ 2235-60-102-1-08-100 ರಡಿ ಒಟ್ಟು 88.62 ಕೋಟಿ ಅನುದಾನವನ್ನು ಸರ್ಕಾರದಿಂದ ಒದಗಿಸಲಾಗಿರುತ್ತದೆ. 2023-24 ನೇ ಸಾಲಿನಲ್ಲಿ ರೈತರ ಆತ್ಮಹತ್ಯೆಯ ಒಟ್ಟು 1091 ಪ್ರಕರಣಗಳು ವರದಿಯಾಗಿದ್ದು, ಈ ಪೈಕಿ 872 ಅರ್ಹ ಪ್ರಕರಣಗಳಿಗೆ ಒಟ್ಟು ರೂ. 43.60 ಕೋಟಿಗಳ ಪರಿಹಾರ ಧನವನ್ನು ಈಗಾಗಲೇ ವಿತರಿಸಲಾಗಿದ್ದು, 66 ಪ್ರಕರಣಗಳಿಗೆ ಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿದೆ. ಉಳಿದ 4 ಪ್ರಕರಣಗಳು ಉಪವಿಭಾಗಾಧಿಕಾರಿಗಳ ಸಮಿತಿಯಲ್ಲಿ ತೀರ್ಮಾನಕ್ಕೆ ಬಾಕಿಯಿದ್ದು, ಇನ್ನುಳಿದ 149 ಪ್ರಕರಣಗಳು ಅರ್ಹವಾಗಿಲ್ಲದ ಕಾರಣ ಉಪವಿಭಾಗಾಧಿಕಾರಿಗಳ ಸಮಿತಿಯಲ್ಲಿ ತಿರಸ್ಕೃತಗೊಂಡಿರುತ್ತವೆ.

2024-25 ನೇ ಸಾಲಿನ ಆಯವ್ಯಯದಲ್ಲಿ ರೈತರ ಆತ್ಮಹತ್ಯೆ, ಬಣವೆ ನಷ್ಟ ಮತ್ತು ಹಾವು- ಕಡಿತ/ಆಕಸ್ಮಿಕ ಮರಣ ಪ್ರಕರಣಗಳಿಗೆ ಪರಿಹಾರವನ್ನು DBT ಮುಖಾಂತರ ಪಾವತಿಸುವ ಸಂಬಂಧ ಲೆಕ್ಕ ಶೀರ್ಷಿಕೆ 2235-60-102-1-08-100 ರಡಿ ರೂ32.19 ಕೋಟಿ ಅನುದಾನವನ್ನು ಸರ್ಕಾರದಿಂದ ಒದಗಿಸಲಾಗಿರುತ್ತದೆ. 2024-25 ನೇ ಸಾಲಿನಲ್ಲಿ ರೈತರ ಆತ್ಮಹತ್ಯೆಯ ಒಟ್ಟು 91 ಪ್ರಕರಣಗಳು ವರದಿಯಾಗಿದ್ದು ಈ ಪೈಕಿ 31 ಅರ್ಹ ಪ್ರಕರಣಗಳಿಗೆ ಒಟ್ಟು ರೂ.1.55 ಕೋಟಿಗಳ ಪರಿಹಾರ ಧನವನ್ನು ಈಗಾಗಲೇ ವಿತರಿಸಲಾಗಿದ್ದು, 40 ಪ್ರಕರಣಗಳಿಗೆ ಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿರುತ್ತದೆ. ಉಳಿದ 14 ಪ್ರಕರಣಗಳು ಉಪವಿಭಾಗಾಧಿಕಾರಿಗಳ ಸಮಿತಿಯಲ್ಲಿ ತೀರ್ಮಾನಕ್ಕೆ ಬಾಕಿಯಿದ್ದು, ಇನ್ನುಳಿದ 12 ಪ್ರಕರಣಗಳು ಅರ್ಹವಾಗಿಲ್ಲದ ಕಾರಣ ಉಪವಿಭಾಗಾಧಿಕಾರಿಗಳ ಸಮಿತಿಯಲ್ಲಿ ತಿರಸ್ಕೃತಗೊಂಡಿರುತ್ತವೆ. ಮುಂದುವರೆದು, ರೈತ ಆತ್ಮಹತ್ಯೆಯ ಅರ್ಹ ಪ್ರಕರಣಗಳಲ್ಲಿನ ಮೃತ ರೈತನ ಪತ್ನಿಗೆ ಮಾಸಿಕ ರೂ.2000/- ವಿಧವಾ ವೇತನವನ್ನು ಪಾವತಿಸಲು ಕ್ರಮವಹಿಸಲಾಗುತ್ತಿದೆ.

ರೈತರ ಆತ್ಮಹತ್ಯೆ , ಬಣವೆ ನಷ್ಟ ಮತ್ತು ಹಾವು-ಕಡಿತ/ಆಕಸ್ಮಿಕ ಮರಣದ ಅರ್ಹ ಪ್ರಕರಣಗಳಿಗೆ ಪರಿಹಾರ ಪಾವತಿಸುವ ಕುರಿತಂತೆ ಉಪವಿಭಾಗಾಧಿಕಾರಿಗಳ ಸಮಿತಿಯ ನಿರ್ಣಯ ಮತ್ತು ಶಿಫಾರಸ್ಸನ್ನು ಅನುಸರಿಸಿ ಜಿಲ್ಲಾಧಿಕಾರಿಗಳ ಕಛೇರಿಯಿಂದ ಡಿಬಿಟಿ ತಂತ್ರಾಂಶದಲ್ಲಿ ಸ್ವೀಕೃತವಾಗುವ ಪ್ರಕರಣಗಳಿಗೆ ಆಗಿಂದಾಗ್ಗೆ ಬಿಲ್ ನ್ನು ಸಿದ್ಧಪಡಿಸಿ ನಿಯಮಾನುಸಾರ ಪರಿಹಾರ ಪಾವತಿಸಲಾಗುತ್ತಿದೆ.

**ಸಂಖ್ಯೆ:ಆರ್‌ಡಿ/117/ ಕೆಎಟಿ/ ಎಸ್‌ಎಸ್‌ಪಿ/ 2024**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**